

# ನೀರ ಬಿಟ್ಟು ನೆಲದ ಮೇಲೆ ದೋಣಿ ಸಾಗಿತು!

**ನೀರ ಮೇಲೂ, ನೆಲದ ಮೇಲೂ ಬದುಕುವ ‘ಉಭಯವಾಸಿ’ ಪ್ರಾಣಿಗಳನ್ನು ಕಂಡಿದ್ದೇವೆ. ನೀರು–ನೆಲ ಎರಡರ ಮೇಲೂ ಓಡಾಡುವ ವಾಹನವನ್ನು ನೋಡಿದ್ದೀರಾ?**

**■ ಜಿ. ನಾಗೇಂದ್ರ ಕಾವೂರು**

‘ನೀರ ಬಿಟ್ಟು ನೆಲದ ಮೇಲೆ ದೋಣಿ ಸಾಗದು, ನೆಲವ ಬಿಟ್ಟು ನೀರ ಮೇಲೆ ಬಂಡಿ ಹೋಗದು’ ಎಂಬ ಹಾಡನ್ನು ನಾವೆಲ್ಲರೂ ಕೇಳಿರುತ್ತೇವೆ. ಆದರೆ ಅಮೆರಿಕದ ಮೆಸಾಚುಸೆಟ್ಸ್ ರಾಜಧಾನಿ ಬೋಸ್ಟನ್ ನಗರದಲ್ಲಿ ಪ್ರವಾಸಿಗರನ್ನು ಹೊತ್ತ ದೋಣಿಯೊಂದು ರಸ್ತೆಯಲ್ಲಿ ಸಾಗುತ್ತಿರುವುದನ್ನು ಕಂಡಾಗ ಈ ಹಾಡಿನ ಸಾಲುಗಳು ಸುಳ್ಳೆನಿಸಿದವು!

ಅಂದು ಸಂಜೆ ಬೋಸ್ಟನ್ ನಗರದ ಬಂದರಿನಲ್ಲಿರುವ ಗಗನಚುಂಬಿ ಕಟ್ಟಡಗಳ ಸೌಂದರ್ಯ ಕಣ್ತುಂಬಿಕೊಳ್ಳುತ್ತಿರುವಾಗ ರಸ್ತೆಯಲ್ಲಿ ಚಲಿಸುತ್ತಿದ್ದ ಹಡಗು ನೀರಿನಲ್ಲಿ ಚಲಿಸುವುದನ್ನು ನೋಡಿ ಬೆರಗಾದೆವು. ವಿಚಾರಿಸಿದಾಗ, ಅದು ನೀರು ಮತ್ತು ರಸ್ತೆಯಲ್ಲಿ ಚಲಿಸಲು ಅನುಕೂಲವಾಗುವ ವಿಶಿಷ್ಟ ರಚನೆಯುಳ್ಳ ‘ಉಭಯಚರಿ’ ವಾಹನವೆಂದು ತಿಳಿಯಿತು.

ಪ್ರವಾಸಕ್ಕೆ ಹೆಚ್ಚು ಒತ್ತು ನೀಡುವ ಬೋಸ್ಟನ್ ನಗರವನ್ನು ಬಸ್ಸಿನಲ್ಲಿ ಕುಳಿತು ವೀಕ್ಷಿಸಲು ಸಾಂಸ್ಕೃತಿಕ, ಐತಿಹಾಸಿಕ, ಸಮಾಧಿಗಳು, ಆಹಾರ, ಹಳೇ ನಗರ, ಹಾರ್ವರ್ಡ್ ವಿಶ್ವವಿದ್ಯಾಲಯ, ಮ್ಯೂಸಿಯಂ ಪ್ರವಾಸ ಹೀಗೆ ಮೊದಲಾದ ಪ್ರತ್ಯೇಕ ಪ್ರವಾಸ ಪ್ಯಾಕೇಜ್‌ಗಳಿವೆ.

ಅಟ್ಲಾಂಟಿಕ್ ಮಹಾಸಾಗರ ದ್ವೀಪಗಳು, ಐತಿಹಾಸಿಕ ಕಟ್ಟಡಗಳು ಹಾಗೂ ತಿಮಿಂಗಲಗಳ ವೀಕ್ಷಣೆಗೆ ಕ್ರೂಸ್ ಪ್ರವಾಸವಿದೆ. ಕಾಲ್ನಡಿಗೆ ಮೂಲಕ ನಗರ ವೀಕ್ಷಣೆಗೆ ‘ಫ್ರೀಡಂ ಟ್ರೇಲ್’ ಹಾಗೂ ಚಾರ್ಲ್ಸ್ ನದಿ ತೀರದ ಐತಿಹಾಸಿಕ ಕಟ್ಟಡಗಳನ್ನು ಹಾಗೂ ನಗರದ ಆಯ್ದ ಪ್ರವಾಸಿ ಆಕರ್ಷಣೆಗಳನ್ನು ವೀಕ್ಷಿಸಲು ‘ಉಭಯಚರಿ’ ಹಡಗಿನ ಪ್ರತ್ಯೇಕ ಪ್ರವಾಸ ಪ್ಯಾಕೇಜ್ ಇದೆ.

ಬೋಸ್ಟನ್ ನಗರವನ್ನು ವೀಕ್ಷಿಸಲು ಟ್ಯಾಕ್ಸಿಗಳು ಲಭ್ಯವಿದ್ದರೂ, ಬಸ್ಸಿನಲ್ಲಿ ಕುಳಿತು ಮಿತವ್ಯಯದಲ್ಲಿ ನಗರವನ್ನು ವೀಕ್ಷಿಸುವ ವ್ಯವಸ್ಥೆಯೂ ಇದೆ. ‘ಹಾಪ್ ಆನ್ ಹಾಪ್ ಆಫ್’ ಟೂರ್ಸ್ ಟಿಕೆಟ್ ಖರೀದಿಸಿ ಬಸ್ಸಿನಲ್ಲಿ ಕುಳಿತು ಪ್ರವಾಸಿ ತಾಣಗಳನ್ನು ವೀಕ್ಷಿಸಬಹುದು. ಚಾಲಕ ನೀಡುವ ‘ಟೂರ್ ಪ್ರೋಗ್ರಾಂ ಗೈಡ್’ನಲ್ಲಿ ಬಸ್ ಚಲಿಸುವ ಮಾರ್ಗ ಹಾಗೂ ಪ್ರವಾಸಿತಾಣಗಳ ವಿವರಗಳಿರುತ್ತವೆ. ನಾವು ನೋಡಬೇಕಾದ ಪ್ರವಾಸಿ ತಾಣದ ನಿಲುಗಡೆಯಲ್ಲಿ ಇಳಿದು, ವೀಕ್ಷಿಸಿದ ನಂತರ ಬರುವ ಮತ್ತೊಂದು ಬಸ್ಸನ್ನು ಹಿಡಿದು ಮುಂದಿನ ಪ್ರವಾಸಿ ತಾಣದ ನಿಲುಗಡೆಯಲ್ಲಿ ಇಳಿಯಬಹುದು. ಹೀಗೆ ಇಡೀ ದಿನ ನಗರವನ್ನು ವೀಕ್ಷಿಸಬಹುದು. ಪ್ರತೀ ನಿಲುಗಡೆಯಲ್ಲಿ ಸಾಮಾನ್ಯವಾಗಿ ಅರ್ಧ ಗಂಟೆಗೊಂದು ಬಸ್ ಬರುತ್ತದೆ. ಒಮ್ಮೆ ಟಿಕೆಟ್ ಖರೀದಿಸಿದರೆ ಸಾಕು ಬೆಳಿಗ್ಗೆ ಯಿಂದ ಸಂಜೆವರೆಗೂ ಓಡಾಡಬಹುದು.

ವಿಶಿಷ್ಟ ವಿನ್ಯಾಸದ ಉಭಯಚರಿ ಹಡಗುಗಳ ಪ್ರವಾಸವನ್ನು ‘ಡಕ್ ಟೂರ್ಸ್’ ಎಂದು ಕರೆಯುತ್ತಾರೆ. ‘ಕಾಂಬೋ ಪ್ಯಾಕ್ ಟಿಕೆಟ್’ ಖರೀದಿಸಿದಲ್ಲಿ ಅಟ್ಲಾಂಟಿಕ್ ಮಹಾಸಾಗರದಲ್ಲಿರುವ ದ್ವೀಪಗಳು ಹಾಗೂ ಚಾರ್ಲ್ಸ್ ನದಿಯ ದಡದಲ್ಲಿರುವ ಐತಿಹಾಸಿಕ ಸ್ಮಾರಕಗಳನ್ನು ವೀಕ್ಷಿಸುವುದರೊಂದಿಗೆ ಅದೇ ಹಡಗಿನಲ್ಲಿ ರಸ್ತೆಯಲ್ಲಿ ಸಂಚರಿಸುವಾಗ ಮಾರ್ಗದಲ್ಲಿ ಸಿಗುವ ಪ್ರಮುಖ ಕಟ್ಟಡಗಳು ಹಾಗೂ ಸ್ಮಾರಕಗಳನ್ನು ನೋಡಬಹುದು. ಗೈಡ್ ಕೂಡ ನಮ್ಮೊಂದಿಗಿರುತ್ತಾರೆ.




ನಿಗದಿತ ಇಳಿಜಾರು ಪ್ರದೇಶದಲ್ಲಿ ಹಡಗು ಅತಿವೇಗವಾಗಿ ಚಾರ್ಲ್ಸ್ ನದಿ ಪ್ರವೇಶಿಸುವಾಗ ರಭಸವಾಗಿ ನೀರನ್ನು ಚಿಮ್ಮುತ್ತಾ ಸಾಗುವಾಗ ಪ್ರವಾಸಿಗರಿಗೆ ರೋಚಕ ಅನುಭವ ನೀಡುತ್ತದೆ. ದಡದಿಂದ ನೋಡುವವರಿಗೆ ಬಸ್ ನೀರಿನಲ್ಲಿ ಚಲಿಸುತ್ತಿರುವಂತೆ ಕಾಣುತ್ತದೆ.

‘ಹಾಪ್ ಆನ್ ಹಾಪ್ ಆಫ್’ ಬಸ್ ಟೂರ್ಸ್ ಮತ್ತು ಡಕ್ ಟೂರ್ಸ್ ಬೋಸ್ಟನ್ ನಗರದ ಬಂದರು ಪ್ರದೇಶದಿಂದ ಹಾಗೂ ಆಯ್ದ ಸ್ಥಳಗಳಿಂದ ಪ್ರಾರಂಭವಾಗುತ್ತದೆ. ಮೇಲೆ ತಿಳಿಸಲಾದ ಎಲ್ಲ ಆಕರ್ಷಣೆಗಳನ್ನು ವೀಕ್ಷಿಸಲು ಕನಿಷ್ಠ ಮೂರುದಿನಗಳ ಸಮಯ ಹಿಡಿಯುತ್ತದೆ. ಪ್ರವಾಸಿಗರ ಅನುಕೂಲಕ್ಕೆ ತಕ್ಕಂತೆ ಯಾವುದಾದರೂ ಪ್ರವಾಸದ ಅಥವಾ ಹಲವು ಪ್ರವಾಸಗಳ ಕಾಂಬೊ ಟಿಕೆಟ್‌ಗಳನ್ನು ಸ್ಥಳದಲ್ಲಿ ಅಥವಾ ಆನ್‌ಲೈನ್‌ನಲ್ಲಿ ಖರೀದಿಸಬಹುದು. ■